# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

**4 (1) (ಬಿ):**

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೋಂದಾಯಿತ ಸ್ವಾಯತ್ತ ಸಂಸ್ಥೆಯಾಗಿದ್ದು, ಮಾಹಿತಿ ಹಕ್ಕು ಕಾಯಿದೆಯ ಕಲಂ 4 (1) (ಬಿ)ಯ ಪ್ರಕಾರ ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಾಗರೀಕರಿಗೆ ನೀಡುವ ಸಲುವಾಗಿ ಪ್ರಕಟಿಸಲಾಗಿದೆ.

1. **ಸಂಸ್ಥೆಯ ಕಾರ್ಯನಿರ್ವಹಣೆ ಮತ್ತು ಕರ್ತವ್ಯಗಳ ವಿವರ** :

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾಗಿ 2005ರ ಜುಲೈನಲ್ಲಿ ಸ್ಥಾಪಿಸಲಾಗಿದ್ದು, ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ಪುರಸ್ಕೃತ ದಿವಂಗತ ಪ್ರೊ. ಯು. ಆರ್.ರಾವ್, ನಿವೃತ್ತ ಅಧ್ಯಕ್ಷರು, ಇಸ್ರೋ/ಕಾರ್ಯದರ್ಶಿ, ಬಾಹ್ಯಾಕಾಶ ಇಲಾಖೆ, ಭಾರತ ಸರ್ಕಾರ ಇವರು ಸಂಸ್ಥಾಪಕ ಅಧ್ಯಕ್ಷರಾಗಿದ್ದರು.

ಸರ್ಕಾರವು ದಿನಾಂಕ 20.05.2025 ರಂದು ಅಕಾಡೆಮಿಯ ಸದಸ್ಯವೃಂದವನ್ನು ಪುನರಚಿಸಿ ಆದೇಶವನ್ನು ಹೊರಡಿಸಿದ್ದು, ತುಮಕೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ರಾಜಾಸಾಬ್ ಎ. ಎಚ್. ರವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುತ್ತದೆ. ಅಕಾಡೆಮಿಯು ಅಧ್ಯಕ್ಷರನ್ನೂ ಸೇರಿಸಿ ಒಟ್ಟು 20 ಸದಸ್ಯರುಗಳನ್ನು ಹೊಂದಿದ್ದು, ಶ್ರೇಷ್ಠ ವಿಜ್ಞಾನಿಗಳು ಮತ್ತು ಹೆಸರಾಂತ ಶಿಕ್ಷಣ ತಜ್ಞರು ಹಾಗೂ ಹಿರಿಯ ಆಡಳಿತಗಾರರು ಸದಸ್ಯರಾಗಿದ್ದಾರೆ. ಶ್ರೀ ಭರತ್ ಎಸ್. ಭಾ.ಆ.ಸೇ, ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/ಎಂಡಿ, ಕೆಸ್ಟೆಪ್ಸ್ ಇವರು ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

**ಅ) ಕೇಂದ್ರದ ಆಡಳಿತ ನಿರ್ವಹಣೆಯನ್ನು ಸಂಕ್ಷಿಪ್ತವಾಗಿ ಈ ಕೆಳಗೆ ನೀಡಲಾಗಿದೆ.**

ಸಂಘ – ನಿಯಮಾವಳಿಯಲ್ಲಿ ವಿವರಿಸಿರುವಂತೆ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಹಾಗೂ ಸರ್ವ ಸದಸ್ಯರ ಸಭೆಗಳಲ್ಲಿ ತೆಗೆದು ಕೊಳ್ಳುವ ನಿರ್ಣಯಗಳಂತೆ ಆಡಳಿತ ನಿರ್ವಹಣೆಯನ್ನು ನಡೆಸಲಾಗುತ್ತದೆ.

**ಆ) ಅಕಾಡೆಮಿಯ ಧ್ಯೇಯೋದ್ದೇಶಗಳು**

- ವಿಜ್ಞಾನ ಸಂವಹನದ ಮೂಲಕ, ವಿಶೇಷವಾಗಿ ಕನ್ನಡದಲ್ಲಿ, ಸಮಾಜದಾದ್ಯಂತ ವೈಜ್ಞಾನಿಕ ಮನೋಭಾವವನ್ನು ಬೆಳೆಸುವುದು
- ಶಿಕ್ಷಣ–ಕೃಷಿ–ಉದ್ಯಮ ಸಂಪರ್ಕದ ಮೂಲಕ, ಗ್ರಾಮೀಣ ಪ್ರದೇಶವನ್ನು ಕೇಂದ್ರೀಕರಿಸಿ, ತಂತ್ರಜ್ಞಾನ ಪ್ರಸರಣಕ್ಕೆ ಅವಕಾಶ ಕಲ್ಪಿಸುವುದು
- ಸಾಮಾಜಿಕ ಒಳಿತಿಗಾಗಿ ನಾವೀನ್ಯತೆ/ಆವಿಷ್ಕಾರ ಮತ್ತು ಉದ್ಯಮಶೀಲತೆಯನ್ನು ಬೆಳೆಸುವುದು
- ಪ್ರಶಸ್ತಿಗಳ ಮೂಲಕ ಪ್ರತಿಭೆ ಹಾಗೂ ಕೊಡುಗೆಗಳನ್ನು ಗುರುತಿಸುವುದು
- ಸಮ್ಮೇಳನಗಳನ್ನು ಮತ್ತು ವಿಜ್ಞಾನ ಜನಪ್ರಿಯ ಕಾರ್ಯಕ್ರಮಗಳನ್ನು ಆಯೋಜಿಸುವುದು
- ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳಲ್ಲಿ ಕೌಶಲ್ಯಾಭಿವೃದ್ಧಿಗೆ ಸಂಪನ್ಮೂಲ ಕೇಂದ್ರವಾಗಿ ಕಾರ್ಯನಿರ್ವಹಿಸುವುದು

- ರಾಜ್ಯಕ್ಕೆ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ/ಆವಿಷ್ಕಾರ ನೀತಿ ಸಲಹಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು

**2. ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯ :**

ಅಕಾಡೆಮಿಯ ಆಡಳಿತ ಕಾರ್ಯಭಾರ ಮತ್ತು ಕಾರ್ಯಕ್ರಮಗಳ ಅನುಷ್ಠಾನವನ್ನು ಸರ್ವ ಸದಸ್ಯರ ಸಭೆ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯಗಳಂತೆ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರು ನಿರ್ವಹಿಸುವರು.

ವೈಜ್ಞಾನಿಕಾಧಿಕಾರಿಗಳು ಯೋಜನೆಗಳ ಅನುಷ್ಠಾನದ ಸಂಯೋಜನೆ, ಪರಿವೀಕ್ಷಣೆ ಮತ್ತು ವರದಿ ತಯಾರಿಕೆಯಲ್ಲಿ ಹಾಗೂ ಆಡಳಿತಾಧಿಕಾರಿ ಮತ್ತು ಸಹಾಯಕ ಲೆಕ್ಕಾಧಿಕಾರಿಗಳು ಆಡಳಿತ ಮತ್ತು ಲೆಕ್ಕಪತ್ರ ನಿರ್ವಹಣೆಯಲ್ಲಿ ಅಕಾಡೆಮಿಯ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳಿಗೆ ನೆರವು ನೀಡುತ್ತಿದ್ದಾರೆ.

**3. ನಿರ್ಣಯ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯವಿಧಾನ, ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ.**

ಆಡಳಿತ ಮತ್ತು ಹಣಕಾಸು ನಿರ್ವಹಣೆಯನ್ನು ಅಕಾಡೆಮಿ ಕಾರ್ಯಕಾರಿ ಸಮಿತಿಯ ನಿರ್ಣಯ ಹಾಗೂ ಮಾರ್ಗದರ್ಶನದಂತೆ ನಡೆಸಲಾಗುವುದು. ಅಕಾಡೆಮಿಯ ದಿನನಿತ್ಯದ ಕಾರ್ಯಚಟುವಟಿಕೆಗಳ ಆಡಳಿತ ಮತ್ತು ಯೋಜನೆಯ ಅನುಷ್ಠಾನವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಘ ನಿಯಮಾವಳಿಯಲ್ಲಿ ವಿವರಿಸಿರುವ ನಿಬಂಧನೆಗಳಂತೆ ಮತ್ತು ಕಾರ್ಯಕಾರಿ ಸಮಿತಿಯ ನಿರ್ಣಯದಂತೆ ನಿರ್ವಹಿಸುವರು.

**4. ಕರ್ತವ್ಯ ನಿರ್ವಹಣೆಗೆ ನಿಗದಿಪಡಿಸಿರುವ ನಿಯಮಗಳು :**

ನಿಯಮ ನಿಬಂಧನೆಗಳನ್ನು ಸಂಘ ನಿಯಮಾವಳಿಯಲ್ಲಿ ವಿವರಿಸಲಾಗಿದೆ ಹಾಗೂ ಕಾರ್ಯಕಾರಿ ಸಮಿತಿ ಮತ್ತು ಸರ್ವಸದಸ್ಯರ ಸಭೆಗಳ ನಿರ್ಣಯಗಳಂತೆ ಅಕಾಡೆಮಿಯಲ್ಲಿ ಕರ್ತವ್ಯ ನಿರ್ವಹಿಸಲಾಗುವುದು.

**5. ಕೇಂದ್ರದ ಸ್ವಾಧೀನದಲ್ಲಿರುವ ಮತ್ತು ಅದರ ಸಿಬ್ಬಂದಿಗಳು ಕರ್ತವ್ಯ ನಿರ್ವಹಣೆಯಲ್ಲಿ ಬಳಸುತ್ತಿರುವ ನಿಯಮ ನಿಬಂಧನೆ, ಆದೇಶಗಳು, ಕೈಪಿಡಿ ಮತ್ತು ದಾಖಲೆಗಳು :**

ಸಂಘ ನಿಯಮಾವಳಿ ಅಲ್ಲದೇ, ಅಕಾಡೆಮಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುವ ಸರ್ವಸದಸ್ಯರ ಸಭೆಯಲ್ಲಿ ನಿಯಮ ನಿಬಂಧನೆಗಳನ್ನು ರಚಿಸಲಾಗುವುದು. ಸದರಿ ನಿಯಮ ನಿಬಂಧನೆಗಳಿಗೆ ತಿದ್ದುಪಡಿಯನ್ನು ಮಾಡುವ ಅವಶ್ಯಕತೆ ಇದ್ದರೆ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಚರ್ಚಿಸಿ, ಅನುಮೋದಿಸಲು ಅಥವಾ ದೃಢೀಕರಿಸಲು ಸರ್ವ ಸದಸ್ಯರ ಸಭೆಗೆ ಶಿಫಾರಸ್ಸು ಮಾಡಲಾಗುವುದು.

**6. ಕೇಂದ್ರದ ಸ್ವಾಧೀನಲ್ಲಿರುವ ವಿವಿಧ ರೀತಿಯ ದಾಖಲೆಗಳ ಬಗ್ಗೆ ವಿವರಣೆ :**

ಅಕಾಡೆಮಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದ ದಾಖಲೆಗಳಾದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಡತಗಳು, ನೇಮಕಾತಿ ಕಡತಗಳು, ಕಾರ್ಯಕಾರಿ ಸಮಿತಿಗಳ ಕಾರ್ಯಸೂಚಿ ಮತ್ತು ನಡವಳಿ, ಸರ್ಕಾರಿ ಆದೇಶಗಳು, ಸೂಚನೆಗಳು ಹಾಗೂ ಲೆಕ್ಕಪತ್ರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಛೇರಿಯಲ್ಲಿ ಸಂರಕ್ಷಿಸಿಡಲಾಗಿದೆ. ಅಲ್ಲದೇ, ಅಕಾಡೆಮಿಯು “ವಿಜ್ಞಾನ ಲೋಕ” ಎಂಬ ದ್ವೈಮಾಸಿಕ ಸಂಚಿಕೆಯನ್ನು ಪ್ರಕಟಿಸಲಾಗುತ್ತಿದೆ.

7. **ನೀತಿ, ನಿರೂಪಣೆ ಅಥವಾ ಕಾರ್ಯಕ್ರಮ ಅನುಷ್ಠಾನದಲ್ಲಿ ನಾಗರೀಕ ಪ್ರತಿನಿಧಿಗಳೊಡನೆ ಸಮಾಲೋಚಿಸುವ ಪ್ರತ್ಯೇಕ ವ್ಯವಸ್ಥೆ ಇದ್ದರೆ ವಿವರಿಸುವುದು.**

ನೀತಿ, ನಿರೂಪಣೆ ಅಥವಾ ಕಾರ್ಯಕ್ರಮ ಅನುಷ್ಠಾನದಲ್ಲಿ ನಾಗರೀಕ ಪ್ರತಿನಿಧಿಗಳೊಡನೆ ಸಮಾಲೋಚಿಸುವ ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ. ಆದರೆ, ಕಛೇರಿಯ ವೇಳೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಭೇಟಿ ಮಾಡಿ ಸಲಹೆ ನೀಡಬಹುದು.

8. **ಕೇಂದ್ರದ ಅಂಗವಾಗಿ ಅಥವಾ ಸಲಹೆ ಸೂಚನೆಗಳನ್ನು ಪಡೆಯಲು ರಚಿತವಾದ ಎರಡು ಅಥವಾ ಹೆಚ್ಚಿನ ಸದಸ್ಯರನ್ನು ಹೊಂದಿರುವ ಮಂಡಳಿ, ಪರಿಷತ್, ಸಮಿತಿ ಮತ್ತು ಇತರೆ ಸಭೆಗಳ ವಿವರ ಹಾಗೂ ಅಂತಹ ಸಭೆಗಳು ಜನಸಾಮಾನ್ಯರಿಗೆ ಮುಕ್ತವಾಗಿದೆಯೆ ಅಥವಾ ಅವುಗಳ ಸಭೆಯ ನಿರ್ಣಯಗಳು ಜನಸಾಮಾನ್ಯರಿಗೆ ದೊರಕುವುದೇ ಎಂಬ ಬಗ್ಗೆ ವಿವರಣೆ.**

ಸರ್ವ ಸದಸ್ಯರ ಸಭೆಯ ಸದಸ್ಯರ ಪಟ್ಟಿಯನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ. ಕಾರ್ಯಕಾರಿ ಸಮಿತಿ ಮತ್ತು ಸರ್ವಸದಸ್ಯರ ಸಭೆಯ ನಿರ್ಣಯಗಳನ್ನು ಸದಸ್ಯರುಗಳಿಗೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಕಳುಹಿಸಿ ಕೊಡಲಾಗುತ್ತಿದೆ. ಅಲ್ಲದೇ, ಕಾರ್ಯಕಾರಿ ಸಮಿತಿಯು ನಿರ್ದಿಷ್ಟ ಕಾರ್ಯಯೋಜನೆ ಅಥವಾ ವಿಷಯಗಳನ್ನು ಚರ್ಚಿಸಿ, ಸೂಕ್ತ ನಿರ್ಣಯ ಕೈಗೊಳ್ಳಲು ಶಿಫಾರಸ್ಸು ಮಾಡುವ ಸಲುವಾಗಿ ಉಪ ಸಮಿತಿಗಳನ್ನು ರಚಿಸುವುದು. ಅಕಾಡೆಮಿಯ ವಿವಿಧ ಸಮಿತಿಯ ಸಭೆಗಳು ಜನಸಾಮಾನ್ಯರಿಗೆ ಮುಕ್ತವಾಗಿರುವುದಿಲ್ಲ ಮತ್ತು ಸಭೆಯ ನಡವಳಿಗಳು ಅವರಿಗೆ ದೊರಕುವುದಿಲ್ಲ.

9. **ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರ :**

ಅಕಾಡೆಮಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ.

10. **ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿ ಪಡೆಯುತ್ತಿರುವ ಮಾಸಿಕ ವೇತನ ಹಾಗೂ ಅವರುಗಳಿಗೆ ನಿಯಮಾನುಸಾರ ನೀಡಬೇಕಾಗಿರುವ ಪರಿಹಾರಧನ ಇವುಗಳ ವಿವರ:**

ಅಕಾಡೆಮಿಯಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಗೆ ಮಾಸಿಕ ವೇತನವನ್ನು ಈ ಉದ್ದೇಶಕ್ಕಾಗಿ ರಚಿಸಿದ ಒಂದು ಉಪ ಸಮಿತಿಯ ಮೂಲಕ ಶೈಕ್ಷಣಿಕ ವಿದ್ಯಾರ್ಹತೆ, ಹಿಂದಿನ ಅನುಭವ ಮತ್ತು ಸಂದರ್ಶನದಲ್ಲಿನ ನಿರ್ವಹಣೆ ಇವುಗಳ ಆಧಾರದ ಮೇಲೆ ನಿಗದಿಪಡಿಸಿದೆ. ಆನಂತರ ವಾರ್ಷಿಕ ಹೆಚ್ಚಳವನ್ನು ಅಧಿಕಾರಿ/ಸಿಬ್ಬಂದಿಯ ಕಾರ್ಯನಿರ್ವಹಣೆ ಮತ್ತು ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು ಪರಿಗಣಿಸಲಾಗುವುದು. ನಿಯಮಾನುಸಾರ ಭವಿಷ್ಯನಿಧಿ ಮತ್ತು ಆರೋಗ್ಯವಿಮೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ವೇತನದ ವಿವರವನ್ನು ಅನುಬಂಧ – 3 ರಲ್ಲಿ ನೀಡಲಾಗಿದೆ.

11. **ಆಯವ್ಯಯದಲ್ಲಿ ತನ್ನ ಅಧೀನ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಅನುದಾನ, ಎಲ್ಲಾ ಯೋಜನೆಗಳ ವಿವರ, ಉದ್ದೇಶಿತ ಖರ್ಚುವೆಚ್ಚ ಮತ್ತು ಪಾವತಿಯ ವರದಿ**

ಅನ್ವಯಿಸುವುದಿಲ್ಲ

12. **ಸಹಾಯಾನುದಾನ ಯೋಜನೆ ಅನುಷ್ಠಾನ ಹಾಗೂ ಹಂಚಿಕೆ ಮಾಡಿದ ಹಣ ಮತ್ತು ಅಂತಹ ಯೋಜನೆಯ ಫಲಾನುಭವಿಗಳ ವಿವರ.**

ಅನ್ವಯಿಸುವುದಿಲ್ಲ

13. **ರಿಯಾಯಿತಿ ಸ್ವೀಕರಿಸಿದವರ ವಿವರ, ಪರ್ಮಿಟ್ ಅಥವಾ ಪ್ರಮಾಣೀಕರಣ ಮಂಜೂರು ಮಾಡಿರುವ ಬಗ್ಗೆ**

ಅನ್ವಯಿಸುವುದಿಲ್ಲ

**14. ಕೇಂದ್ರದಲ್ಲಿ ಲಭ್ಯವಿರುವ ಮಾಹಿತಿ ಮತ್ತು ವಿದ್ಯುನ್ಮಾನ ರೂಪದಲ್ಲಿರಿಸಿರುವ ಮಾಹಿತಿಯ ಬಗ್ಗೆ ವಿವರ.**

ಯೋಜನಾ ಪ್ರಸ್ತಾವನೆ, ಅನುಷ್ಠಾನಗೊಳಿಸಿದ ಯೋಜನೆಗಳ ವಿವರ, ವರದಿಗಳು ಮತ್ತು ಅಧಿಕೃತ ಪತ್ರ ವ್ಯವಹಾರಗಳ ವಿವರವನ್ನು ಗಣಕೀಕರಿಸಲಾಗಿದೆ. ಅಕಾಡೆಮಿಯು ಅನುಷ್ಠಾನಗೊಳಿಸಿರುವ ಪರಿಯೋಜನೆಗಳ ಸಮಗ್ರ ಮಾಹಿತಿಯನ್ನು ಅಂತರ್ಜಾಲದ www.kstacademy.in ತಾಣದಲ್ಲಿ ಮಾಹಿತಿಗಳನ್ನು ಸುಲಭವಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಅಳವಡಿಸಲಾಗಿದೆ.

**15. ನಾಗರೀಕರಿಗೆ ಮಾಹಿತಿ ಪಡೆಯಲು ಲಭ್ಯ ವ್ಯವಸ್ಥೆಯ ವಿವರ ಹಾಗೂ ಗ್ರಂಥಾಲಯ ಮತ್ತು ವಾಚನಾಲಯ ವ್ಯವಸ್ಥೆಯು ಜನಸಾಮಾನ್ಯರಿಗೆ ಲಭ್ಯವಿದ್ದರೆ, ಅವುಗಳ ಕೆಲಸದ ವೇಳೆಯನ್ನು ನೀಡುವುದು.**

ಅಕಾಡೆಮಿಗೆ ಸಂಬಂಧಿಸಿದ ಮಾಹಿತಿಯನ್ನು ಕಛೇರಿಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಂದ ಕಛೇರಿ ವೇಳೆ ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ (ಪ್ರತಿ ತಿಂಗಳ ಎರಡನೇ ಶನಿವಾರ ಮತ್ತು ಇತರೆ ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ) ಪಡೆಯಬಹುದು.

**16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಇತರ ವಿವರಗಳು**

ಸಾರ್ವಜನಿಕ ಮಾಹಿತಿ ಅಧಿಕಾರಿ :
ಡಾ. ಆನಂದ್ ಆರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ,
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ಮೇಜರ್ ಸಂದೀಪ್ ಉನ್ನೀಕೃಷ್ಣನ್ ರಸ್ತೆ,
ದೊಡ್ಡ ಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು – 560097;
ದೂರವಾಣಿ/ಫ್ಯಾಕ್ಸ್: 080–29721550; ಇಮೇಲ್ : ksta.gok@ gmail.com

**17. ನಿಗದಿ ಪಡಿಸಬಹುದಾದ ಇನ್ನಾವುದೇ ಮಾಹಿತಿಗಳನ್ನು ನಂತರದಲ್ಲಿ ಈ ಪ್ರಕಟಣೆಯನ್ನು ಆಗಿಂದಾಗ್ಗೆ ಆಧುನೀಕರಿಸಲಾಗುವುದು.**

# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸರ್ವಸದಸ್ಯರುಗಳ ಪಟ್ಟಿ

| ಕ್ರ.ಸಂ. | ಹೆಸರು ಮತ್ತು ವಿಳಾಸ | |
|---|---|---|
| **ನಾಮ ನಿರ್ದೇಶಿತ ಸದಸ್ಯರು (14 ಸದಸ್ಯರು, ಅಧ್ಯಕ್ಷರು ಸೇರಿ)** ಪದನಿಮಿತ್ತ ಸದಸ್ಯರು (**6** ಸದಸ್ಯರು) | | |
| 1 | **ಪ್ರೊ. ರಾಜಾಸಾಬ್ ಎ. ಎಚ್.,**<br>ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ | ಅಧ್ಯಕ್ಷರು |
| 2 | **ಶ್ರೀ ರಿತೀಷ್ ಕುಮಾರ್ ಸಿಂಗ್, ಭಾಆಸೇ**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | ಸದಸ್ಯರು |
| 3 | **ಡಾ. ಎನ್. ಮಂಜುಳ, ಭಾಆಸೇ**<br>ಸರ್ಕಾರದ ಕಾರ್ಯದರ್ಶಿಗಳು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ & ತಂತ್ರಜ್ಞಾನ ಇಲಾಖೆ | ಸದಸ್ಯರು |
| 4 | **ಶ್ರೀ ರಣದೀಪ್ ಡಿ, ಭಾಆಸೇ**<br>ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| 5 | **ಶ್ರೀ ಅಜುಂ ಪರ್ವೇಶ್, ಭಾಆಸೇ**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಮತ್ತು ಜೀವಪರಿಸರ ಇಲಾಖೆ | ಸದಸ್ಯರು |
| 6 | **ಶ್ರೀಮತಿ ತುಲಸಿ ಮದ್ದಿನೇನಿ, ಭಾಆಸೇ**<br>**ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ** | |
| 7 | **ಶ್ರೀ ಭರತ್ ಎಸ್, ಭಾಆಸೇ**<br>ನಿರ್ದೇಶಕರು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ & ತಂತ್ರಜ್ಞಾನ ಇಲಾಖೆ/ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್/ ಸದಸ್ಯಕಾರ್ಯದರ್ಶಿಗಳು, ಕವಿತಂಅ | ಸದಸ್ಯ ಕಾರ್ಯದರ್ಶಿಗಳು |
| 8 | **ಪ್ರೊ. ಎಸ್. ಬಿ. ದಂಡಿನ್**, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ | ಅಧ್ಯಕ್ಷರು |
| 9 | **ಪ್ರೊ. ಹೆಚ್. ಎಸ್. ನಾಗರಾಜ**, ಸಂಸ್ಥಾಪಕ ನಿರ್ದೇಶಕರು, ಪ್ರಯೋಗ ಶಿಕ್ಷಣ ಸಂಶೋಧನಾ ಸಂಸ್ಥೆ | ಸದಸ್ಯರು |
| 10 | **ಪ್ರೊ. ಎಸ್. ರಾಜೇಂದ್ರ ಪ್ರಸಾದ್**, ವಿಶ್ರಾಂತ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ | ಸದಸ್ಯರು |
| 11 | **ಡಾ. ಹೆಚ್. ಹೊನ್ನೇಗೌಡ**, ನಿವೃತ್ತ ವಿಶೇಷ ಕಾರ್ಯದರ್ಶಿಗಳು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | ಸದಸ್ಯರು |
| 12 | **ಡಾ. ಅಶೋಕ್ ಎಸ್. ಆಲೂರು**, ಕುಲಪತಿಗಳು, ಕೊಡಗು ವಿಶ್ವವಿದ್ಯಾನಿಲಯ | ಸದಸ್ಯರು |
| 13 | **ಡಾ. ವಸುಂದರ ಭೂಪತಿ**, ಮಾಜಿ ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ | ಸದಸ್ಯರು |
| 14 | **ಡಾ. ಎಂ. ಕೆ. ನಾಯ್ಕ**, ವಿಶ್ರಾಂತ ಕುಲಪತಿಗಳು, ಶಿವಮೊಗ್ಗ ಕೃಷಿ & ತೋಟಗಾರಿಕೆ ವಿಶ್ವವಿದ್ಯಾನಿಲಯ | ಸದಸ್ಯರು |
| 15 | **ಡಾ. ಹೆಚ್. ನಾಗನಗೌಡ**, ನಿವೃತ್ತ ನಿರ್ದೇಶಕರು, ರಾಷ್ಟ್ರೀಯ ಸೌರ ತಂತ್ರಜ್ಞಾನಗಳ ತರಬೇತಿ ಕೇಂದ್ರ | ಸದಸ್ಯರು |
| 16 | **ಡಾ. ಪ್ರಭಾಕರ ಸಂಗೂರ್ ಮಠ**, ನಿವೃತ್ತ ಕಾರ್ಯನಿರ್ವಾಹಕ ನಿರ್ದೇಶಕರು, ಹಟ್ಟಿ ಗೋಲ್ಡ್ ಮೈನ್ಸ್ ಕಂ. ಲಿ. | ಸದಸ್ಯರು |
| 17 | **ಡಾ. ಚಂದ್ರಶೇಖರ ಬಿರಾದರ**, ಸಂಸ್ಥಾಪಕರು & ಸಿಎಂಡಿ, ಗ್ಲೋಬಲ್ ಗ್ರೀನ್ ಗ್ರೋತ್ | ಸದಸ್ಯರು |
| 18 | **ಡಾ. ಹೆಚ್. ಎನ್. ಜಗನ್ನಾಥ ರೆಡ್ಡಿ**, ಪ್ರೊಫೆಸರ್, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಇನ್ಸ್ಟಿಟ್ಯೂಟ್ ಆಫ್ ಟಕ್ನಾಲಜಿ | ಸದಸ್ಯರು |
| 19 | **ಡಾ. ಹುಲಿಕಲ್ ನಟರಾಜ್**, ಸಂಸ್ಥಾಪಕ ಅಧ್ಯಕ್ಷರು, ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಮಂಡಳಿ | ಸದಸ್ಯರು |
| 20 | **ಶ್ರೀ ಕೃಷ್ಣಮೂರ್ತಿ ಮಂಜುನಾಥ್**, ಅಧ್ಯಕ್ಷರು, ಮಾರ್ಸ್ ಹೋಮ್ಬೇಸ್ ಆರ್ಗನೈಸೇಷನ್ ಅಕಾಡೆಮಿ | ಸದಸ್ಯರು |

**ಅನುಬಂಧ – 2**

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಿಬ್ಬಂದಿಗಳ ವಿವರ

1. ಡಾ. ಆನಂದ್ ಆರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
2. ಶ್ರೀ ವಿ.ಕೆ. ಶ್ರೀನಿವಾಸು, ಹಿರಿಯ ವೈಜ್ಞಾನಿಕ ಅಧಿಕಾರಿ
3. ಶ್ರೀ ಉಮೇಶ್ ಘಾಟಗೆ, ವೈಜ್ಞಾನಿಕ ಅಧಿಕಾರಿ
4. ಶ್ರೀ ಮಹದೇವೇಗೌಡ, ಆಡಳಿತಾಧಿಕಾರಿ
5. ಶ್ರೀ. ಹೆಚ್. ವಿ. ಹೊನ್ನೇಗೌಡ, ಲೆಕ್ಕ ಅಧೀಕ್ಷಕ
6. ಶ್ರೀ ದಿಲೀಪ್ ಕುಮಾರ್, ಕಛೇರಿ ಅಧೀಕ್ಷಕ
7. ಕು. ಲೀಲು, ಶೀಘ್ರಲಿಪಿಗಾರ /ಆಪ್ತ ಸಹಾಯಕಿ
8. ಶ್ರೀ ಪಾಂಡುರಂಗ ಕೆ ಎಸ್, ಶೀಘ್ರಲಿಪಿಗಾರ/ ಆಪ್ತ ಸಹಾಯಕ
9. ಶ್ರೀ. ಚಂದ್ರಶೇಖರಮೂರ್ತಿ ಎಸ್., ಪ್ರಥಮ ದರ್ಜೆ ಸಹಾಯಕ
10. ಶ್ರೀ. ಉಮೇಶ್ ಕೆ.ಸಿ., ಕಿರಿಯ ಸಹಾಯಕ
11. ಶ್ರೀ ಗೋಪಾಲಯ್ಯ, ಚಾಲಕ
12. ಶ್ರೀ ಕೆ.ಸಿ. ರಮೇಶ್, ಚಾಲಕ
13. ಶ್ರೀ ಭರತ್ ಕುಮಾರ್ ಕೆ ಎಸ್, ದಲಾಯತ್
14. ಶ್ರೀ ಮೊಹನ್ ಇ, ಮೆಸೆಂಜರ್
15. ಶ್ರೀಮತಿ ಲಲಿತ

## ಅಕಾಡೆಮಿಯ ವಿವಿಧ ಹುದ್ದೆಗಳಿಗೆ ನಿಗದಿಪಡಿಸಿರುವ ಮಾಸಿಕ ವೇತನದ ವಿವರ.

| ಕ್ರ. ಸಂ. | ಹೆಸರು | ಪದನಾಮ | ವೇತನ |
|---|---|---|---|
| 1. | ಡಾ. ಎ.ಎಂ. ರಮೇಶ್ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | 1,35,309 |
| 2. | ಡಾ. ಆನಂದ್ ಆರ್. | ಹಿರಿಯ ವೈಜ್ಞಾನಿಕ ಅಧಿಕಾರಿ | 1,23,451 |
| 3 | ಶ್ರೀ ವಿ.ಕೆ. ಶ್ರೀನಿವಾಸು | ವೈಜ್ಞಾನಿಕ ಅಧಿಕಾರಿ–I | 1,06,366 |
| 4. | ಶ್ರೀ ಉಮೇಶ್ ಘಾಟಗೆ | ವೈಜ್ಞಾನಿಕ ಅಧಿಕಾರಿ–I | 1,01,226 |
| 5. | ಶ್ರೀ ಮಹದೇವೇಗೌಡ | ಆಡಳಿತಾಧಿಕಾರಿ. | 1,03,796 |
| 6. | ಶ್ರೀ. ಹೆಚ್. ವಿ. ಹೊನ್ನೇಗೌಡ | ಲೆಕ್ಕ ಅಧೀಕ್ಷಕ | 73,500 |
| 7. | ಶ್ರೀ ದಿಲೀಪ್ | ಕಛೇರಿ ಅಧೀಕ್ಷಕ | 60,381 |
| 8. | ಕು. ಲೀಲು | ಆಪ್ತ ಸಹಾಯಕಿ | 53,045 |
| 9. | ಶ್ರೀ ಪಾಂಡುರಂಗ, | ಶೀಘ್ರಲಿಪಿಗಾರ | 37,018 |
| 10. | ಶ್ರೀ. ಚಂದ್ರಶೇಖರಮೂರ್ತಿ ಎಸ್. | ಪ್ರಥಮ ದರ್ಜೆ ಸಹಾಯಕ | 38,776 |
| 11. | ಶ್ರೀ. ಉಮೇಶ್ ಕೆ.ಸಿ. | ಕಿರಿಯ ಸಹಾಯಕ | 33,028 |
| 12 | ಗೋಪಾಲಯ್ಯ | ಚಾಲಕ | 34,172 |
| 13 | ಕೆ.ಸಿ. ರಮೇಶ್ | ಚಾಲಕ | 33,428 |
| 14 | ಶ್ರೀ ಭರತ್ | ದಲಾಯತ್ | 29,444 |
| 15 | ಶ್ರೀ ಮೊಹನ್ | ಮೆಸೆಂಜರ್ | 27,482 |
| 16 | ಶ್ರೀಮತಿ ಲಲಿತ | ಸ್ವಚ್ಚತಾಗಾರರು | 13,200 |